

KASTURBA MEDICAL COLLEGE
MANIPAL
(A constituent unit of MAHE, Manipal)

world diabetes day

**Kasturba Hospital, Manipal**
in association with
**Department of Endocrinology**

*cordially invite you to the inauguration of*

**DIABETES AWARENESS EXHIBITION &**
*launch of*
**PATIENT DIABETES SELF MANAGEMENT DIARY**
*on the occasion of* **WORLD DIABETES DAY - 2022**

Education to Protect Tomorrow

**14th November 2022**
Time: 10:00 am
Venue: Smt. Sharada Madhav Pai OPD Entrance, Manipal

*Chief Guest*
**Lt. Gen. (Dr) M D Venkatesh**
*Vice-Chancellor*
*MAHE, Manipal*

*Guest of Honour*
**Dr G Arun Maiya**
*Dean*
*Manipal College of Health Professions*
*MAHE, Manipal*

*Presided by*
**Dr H S Ballal**
*Pro-Chancellor*
*MAHE, Manipal*

**Dr Sahana Shetty**
*Professor & Head*
*Department of Endocrinology*
*Kasturba Medical College, Manipal*
*& Hospital, MAHE, Manipal*

| **Dr Avinash Shetty** | **Dr Anand Venugopal** | **Dr Sharath Kumar Rao** |
|---|---|---|
| *Medical Superintendent* | *Chief Operating Officer* | *Dean* |
| *Kasturba Hospital, Manipal* | *Teaching Hospitals, MAHE, Manipal* | *Kasturba Medical College, Manipal* |



## Program Schedule

Inauguration of Diabetes Awareness Exhibition by
Dr H S Ballal
*Pro Chancellor, MAHE, Manipal*

Welcome Address
Dr Sharath Kumar Rao
*Dean, Kasturba Medical College, Manipal*

Overview of World Diabetes Day
Dr Sahana Shetty
*Professor & Head*
*Department of Endocrinology, Kasturba Medical College Manipal & Hospital, Manipal*

Address by Guest of Honour
Dr G Arun Maiya
*Dean, Manipal College of Health Professions, MAHE, Manipal*

Launch of Patient Diabetes Self Management Diary by Chief Guest
Lt. Gen. (Dr) M D Venkatesh
*Vice-Chancellor, MAHE, Manipal*

Address by Chief Guest
Lt. Gen. (Dr) M D Venkatesh
*Vice-Chancellor, MAHE, Manipal*

Prize Distribution for Winners of Poster and Quiz Competition

Presidential Address by
Dr H S Ballal
*Pro Chancellor, MAHE, Manipal*

Vote of Thanks
Dr Avinash Shetty
*Medical Superintendent, Kasturba Hospital, Manipal*




KASTURBA HOSPITAL
MANIPAL
(Teaching hospital of KMC Manipal, a unit of MAHE)
ಕಸ್ತೂರ್ಬಾ ಆಸ್ಪತ್ರೆ ಮಣಿಪಾಲದ ವತಿಯಿಂದ
ವಿಶ್ವ ಮಧುಮೇಹ ದಿನಾಚರಣೆಯ ಪ್ರಯುಕ್ತ
ಮಧುಮೇಹ ಆರೋಗ್ಯ ಜಾಗೃತಿ ಪ್ರದರ್ಶನ
ಮತ್ತು ಉಚಿತ ತಪಾಸಣಾ ಶಿಬಿರ
14 ನವೆಂಬರ್ 2022

ಪ್ರಜಾವಾಣಿ
ಬುಧವಾರ • ನವೆಂಬರ್ 16, 2022

ಮಧುಮೇಹ ಆರೋಗ್ಯ ಜಾಗೃತಿ ಮತ್ತು ಮಧುಮೇಹ ತಪಾಸಣೆ

# 'ಭಾರತ ಮಧುಮೇಹ ರಾಜಧಾನಿ'

ಪ್ರಜಾವಾಣಿ ವಾರ್ತೆ

ಉಡುಪಿ: ಮಣಿಪಾಲದ ಕಸ್ತೂರಬಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಅಂತಃಸ್ರಾವ ಶಾಸ್ತ್ರ ವಿಭಾಗದಿಂದ ಸೋಮವಾರ ಮಧುಮೇಹ ಆರೋಗ್ಯ ಜಾಗೃತಿ ಪ್ರದರ್ಶನ ಮತ್ತು ಉಚಿತ ಮಧುಮೇಹ ತಪಾಸಣಾ ಶಿಬಿರ ನಡೆಯಿತು.

ಮಾಹೆ ಸಹ ಕುಲಾಧಿಪತಿ ಡಾ.ಎಚ್.ಎಸ್.ಬಲ್ಲಾಳ್ ಮಧುಮೇಹ ಆರೋಗ್ಯ ಜಾಗೃತಿ ಪ್ರದರ್ಶನ ಮತ್ತು ಉಚಿತ ಮಧುಮೇಹ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಮಾತನಾಡಿ 'ವಿಶ್ವದಲ್ಲಿ ಭಾರತವನ್ನು ಮಧುಮೇಹದ ರಾಜಧಾನಿ ಎಂದು ಕರೆಯಲಾಗುತ್ತಿದೆ. 'ಸೈಲೆಂಟ್ ಕಿಲ್ಲರ್' ಎಂದು ಕರೆಯಲಾಗುವ ಮಧುಮೇಹವನ್ನು ನಿರ್ಲಕ್ಷ್ಯಿಸಿದರೆ ದೇಹದ ಎಲ್ಲ ಅಂಗಗಳ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂದರು.

ಮಧುಮೇಹದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಅಗತ್ಯವಾಗಿದ್ದು, ಈ ನಿಟ್ಟಿನಲ್ಲಿ ಕಸ್ತೂರಬಾ ಆಸ್ಪತ್ರೆ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಎಂದರು.

ರೋಗಿಗಳ ಮಧುಮೇಹ ಸ್ವಯಂ ನಿರ್ವಹಣಾ ಡೈರಿ ಬಿಡುಗಡೆ ಮಾಡಿ ಮಾತನಾಡಿದ ಮಾಹೆ ಕುಲಪತಿ ಡಾ.ಎಂ.ಡಿ.ವೆಂಕಟೇಶ್, 'ದೇಶದಲ್ಲಿ 8 ಕೋಟಿ ಜನರು ಮತ್ತು ವಿಶ್ವದಲ್ಲಿ 60 ಕೋಟಿ ಜನರು ಮಧುಮೇಹದಿಂದ ಬಳಲುತ್ತಿದ್ದಾರೆ. ಕೇವಲ ವೈದ್ಯರಿಂದ ಮಧುಮೇಹ ತಡೆಯಲು ಸಾಧ್ಯವಿಲ್ಲ. ಪ್ರತಿಯೊಬ್ಬರೂ ಮಧುಮೇಹದ ಬಗ್ಗೆ ಅರಿವು ಹೊಂದಿ ರೋಗ ಬಾರದಂತೆ ಎಚ್ಚರ ವಹಿಸಬೇಕು. ಇದಕ್ಕೆ ಪೂರಕವಾಗಿ ಉತ್ತಮ ಆರೋಗ್ಯ ದಿನಚರಿ ರೂಢಿಸಿಕೊಳ್ಳಬೇಕು ಎಂದರು.

ಮಣಿಪಾಲ ಕಾಲೇಜ್ ಆಫ್ ಹೆಲ್ತ್ ಪ್ರೊಫೆಶನ್ ಡೀನ್ ಡಾ.ಅರುಣ್ ಜಿ.ಮಯ್ಯ ಮಾತನಾಡಿ, ಮಧುಮೇಹ ರೋಗಿಗಳ ಮತ್ತು ಅವರ ಪಾದದ ಬಯೋಮೆಕಾನಿಕಲ್ ವಿಶ್ಲೇಷಣೆಗಾಗಿ ಸರಳ ಮೂಲಪ್ರತಿಯನ್ನು ಕೆಎಂಸಿ ಅಭಿವೃದ್ಧಿಪಡಿಸಿದ್ದು, ಮಧುಮೇಹ ರೋಗಿಗಳಿಗೆ ಹೆಚ್ಚು ನೆರವಾಗಲಿದೆ ಎಂದರು.

ಕೆಎಂಸಿ ಡೀನ್ ಡಾ. ಶರತ್ ಕುಮಾರ್ ರಾವ್ ಸ್ವಾಗತಿಸಿದರು. ಆಸ್ಪತ್ರೆಯಯ ವೈದ್ಯಕೀಯ ಅಧೀಕ್ಷಕ ಡಾ.ಅವಿನಾಶ ಶೆಟ್ಟಿ ವಂದಿಸಿದರು. ಮಾಹೆ ಬೋಧನಾ ಆಸ್ಪತ್ರೆಗಳ ಮುಖ್ಯ ನಿರ್ವಹಣಾಧಿಕಾರಿ ಡಾ.ಆನಂದ್ ವೇಣುಗೋಪಾಲ್ ಉಪಸ್ಥಿತರಿದ್ದರು.

ಎಂಡೋಕ್ರೈನಾಲಜಿ ವಿಭಾಗದ ಮುಖ್ಯಸ್ಥೆ ಡಾ.ಸಹನಾ ಶೆಟ್ಟಿ ಮಧುಮೇಹ ಕುರಿತು ಅವಲೋಕನ ನೀಡಿದರು. ಕಾರ್ಯಕ್ರಮದಲ್ಲಿ ಮಧುಮೇಹ ಕುರಿತು ಪೋಸ್ಟರ್ ಹಾಗೂ ರಸಪ್ರಶ್ನೆ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.



ಮಣಿಪಾಲದ ಕಸ್ತೂರಬಾ ವೈದ್ಯಕೀಯ ಕಾಲೇಜಿನಲ್ಲಿ ಸೋಮವಾರ ಮಧುಮೇಹ ಆರೋಗ್ಯ ಜಾಗೃತಿ ಪ್ರದರ್ಶನ ಮತ್ತು ಉಚಿತ ಮಧುಮೇಹ ತಪಾಸಣಾ ಶಿಬಿರದಲ್ಲಿ ಮಾಹೆ ಕುಲಪತಿ ಡಾ.ಎಂ.ಡಿ.ವೆಂಕಟೇಶ್ ರೋಗಿಗಳ ಮಧುಮೇಹ ಸ್ವಯಂ ನಿರ್ವಹಣಾ ಡೈರಿ ಬಿಡುಗಡೆ ಮಾತನಾಡಿದರು.

## 5,000 ಮಂದಿ ಶಿಬಿರದಲ್ಲಿ ಭಾಗಿ

'ನಾಳೆಯನ್ನು ರಕ್ಷಿಸಲು ಮಧುಮೇಹ ಶಿಕ್ಷಣ' ಎಂಬ ಘೋಷವಾಕ್ಯದಡಿ ಸಾರ್ವಜನಿಕರಲ್ಲಿ ಮಧುಮೇಹದ ಕುರಿತು ಜಾಗೃತಿ ಹಾಗೂ ತಡೆಗಟ್ಟುವಿಕೆ ಬಗ್ಗೆ ಅರಿವು ಮೂಡಿಸಲಾಯಿತು. ಕಾರ್ಯಕ್ರಮದಲ್ಲಿ ಮಧುಮೇಹ, ರಕ್ತದೊತ್ತಡ ತಪಾಸಣೆ ನಡೆಯಿತು. ಮಧುಮೇಹ ಸ್ವಯಂ ನಿರ್ವಹಣಾ ಡೈರಿ ಬಿಡುಗಡೆ ಮಾಡಲಾಯಿತು. 5,000ಕ್ಕೂ ಹೆಚ್ಚು ಮಂದಿ ಪ್ರಯೋಜನ ಪಡೆದರು.

THE TIMES OF INDIA, MANGALURU
TUESDAY, NOVEMBER 15, 2022

**Diabetic screening camp held**

More than 5,000 people took part in the mega diabetic health awareness exhibition and free diabetic screening camp, organised by the Department of Endocrinology of Kasturba Medical College and Hospital, Manipal, on Monday. The theme for the year is 'Education to Protect Tomorrow'.

ಕನ್ನಡಪ್ರಭ
ಬುಧವಾರ 16.11.2022

# ಮಧುಮೇಹ ಸೈಲೆಂಟ್ ಕಿಲ್ಲರ್, ಜಾಗೃತಿ ಅಗತ್ಯ: ಡಾ.ಬಲ್ಲಾಳ್

• **ಕನ್ನಡಪ್ರಭ ವಾರ್ತೆ** ಮಣಿಪಾಲ

ವಿಶ್ವ ಮಧುಮೇಹ ದಿನದ ಅಂಗವಾಗಿ ಇಲ್ಲಿನ ಕಸ್ತೂರ್ಬಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಅಂತಃಸ್ರಾವಶಾಸ್ತ್ರ ವಿಭಾಗವು ಬೃಹತ್ ಮಧುಮೇಹ ಆರೋಗ್ಯ ಜಾಗೃತಿ ಪ್ರದರ್ಶನ ಮತ್ತು ಉಚಿತ ಮಧುಮೇಹ ತಪಾಸಣಾ ಶಿಬಿರ ಆಯೋಜಿಸಿತ್ತು. ಈ ಶಿಬಿರದಲ್ಲಿ 5000ಕ್ಕೂ ಹೆಚ್ಚು ಜನರು ಪ್ರಯೋಜನ ಪಡೆದರು.

ಈ ಶಿಬಿರವನ್ನು ಮಾಹೆ ಮಣಿಪಾಲದ ಸಹಕುಲಾಧಿಪತಿ ಡಾ.ಎಚ್.ಎಸ್.ಬಲ್ಲಾಳ್ ಉದ್ಘಾಟಿಸಿ, ವಿಶ್ವದಲ್ಲಿ ಭಾರತವನ್ನು ಮಧುಮೇಹದ ರಾಜಧಾನಿ ಎಂದು ಕರೆಯಲಾಗುತ್ತದೆ. ಈ ರೋಗವು ಸೈಲೆಂಟ್ ಕಿಲ್ಲರ್ ಆಗಿದ್ದು, ಇದರ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಈ ಶಿಬಿರ ಪ್ರದರ್ಶನ ಆಯೋಜಿಸಲಾಗಿದೆ ಎಂದರು.



ಮಧುಮೇಹ ಆರೋಗ್ಯ ಜಾಗೃತಿ ಪ್ರದರ್ಶನ ಮತ್ತು ಉಚಿತ ಮಧುಮೇಹ ತಪಾಸಣಾ ಶಿಬಿರ ನಡೆಯಿತು.

ಮಧುಮೇಹ ರೋಗಿಗಳ ಸ್ವಯಂ ನಿರ್ವಹಣಾ ಡೈರಿಯನ್ನು ಮಾಹೆ ಕುಲಪತಿ ಲೆ.ಜ. ಡಾ.ಎಂ.ಡಿ.ವೆಂಕಟೇಶ್ ಬಿಡುಗಡೆ ಮಾಡಿದರು. ಮಣಿಪಾಲ್ ಕಾಲೇಜ್ ಆಫ್ ಹೆಲ್ತ್ ಪ್ರೊಫೆಶನ್ಸ್‌ನ ಡೀನ್ ಡಾ.ಅರುಣ್ ಜಿ. ಮಯ್ಯ, ಮುಖ್ಯ ನಿರ್ವಹಣಾಧಿಕಾರಿ ಡಾ.ಆನಂದ್ ವೇಣುಗೋಪಾಲ್ ಉಪಸ್ಥಿತರಿದ್ದರು. ಕೆಎಂಸಿ ಡೀನ್ ಡಾ.ಶರತ್ ಕುಮಾರ್ ಕೆ. ರಾವ್ ಸ್ವಾಗತಿಸಿದರು. ವೈದ್ಯಕೀಯ ಅಧೀಕ್ಷಕ ಡಾ.ಅವಿನಾಶ ಶೆಟ್ಟಿ ವಂದಿಸಿದರು.

ಇದೇ ಸಂದರ್ಭ ಮಧುಮೇಹ ಕುರಿತ ಪೋಸ್ಟರ್ ಮತ್ತು ರಸಪ್ರಶ್ನೆ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.